ಜಂಪರ್ ಕೆಳಗೆ ಜೋಲುವ ಬೊಜ್ಜು ಕಾಣಿಸುತ್ತದೆ. ಈ ಅಪೂರ್ಣ ಮನುಷ್ಯ ಶರೀರಗಳ ಚೂರುಗಳು ನೋಡುವವರ ಕಣ್ಣಲ್ಲಿ ಸೇರಿದಾಗ ಅಲ್ಲೊಂದು ಸಂಸಾರವಿರಬಹುದೆಂಬ ಭ್ರಮೆ ಉಂಟಾಗುತ್ತದೆ. ಅವರ ಮೌನ ಮನೆಯ ನಿಶ್ಶಬ್ದವನ್ನು ಸೇರಿ ಈ ಭ್ರಮೆಯನ್ನು ಇನ್ನಷ್ಟು ನಿರ್ಮಾನುಷವಾಗಿಸಿದೆ.

ಅಂಗಳಕ್ಕೆ ಪೂರ್ವದ ಅಕ್ಷಯ ನೆರಳು ಸುರಿವ ಮಾವಿನ ಮರದಾಚೆಯ ಮಕ್ಕಿಗದ್ದೆಯಲ್ಲಿ ಎತ್ತರದ ಹಾಳಿಕಂಠದ ಮುಳ್ಳಿನ ಜಿಗ್ಗು–ಹುಲ್ಲಿನ ಕರಡಕ್ಕೆ ಅಕ್ಕು ಬೆಂಕಿ ಹಾಕಿದ್ದಳು; ದಾಹದ ಬೆಂಕಿ ಒಣ ಕಸವನ್ನು ಮುಕ್ಕುತ್ತ ಹಳದಿ ರಾಕ್ಷಸನಾಗಿ ಬೃಹತ್ ಆಕಾರ ತಾಳುತ್ತ ಜ್ವಾಲೆಯ ನಾಲಗೆ ಚಾಚಿ ನರ್ತಿಸತೊಡಗಿತ್ತು; ಅದರ ಅಗೋಚರ ದವಡೆಯೊಳಗೆ ಕಸ–ಕಡ್ಡಿಗಳು ಚೊರಚೊರನೆ ಸುಟ್ಟು ಭಸ್ಮವಾಗುತ್ತಿದ್ದವು; ಹೊಗೆ ಹಸುರು ಸೀರೆಯಾಗಿ ಸುರುಳಿ ಸುತ್ತಿಕೊಂಡು ಏರುತ್ತ ರಣಚಂಡಿಯ ಕೂದಲಂತೆ ಹರಡಿ ಬಯಲ ಬಿಸಿಲನ್ನು ಕಂದು ಬಣ್ಣಕ್ಕೆ ತಿರುಗಿಸಿತು. ಆಕಾಶಕ್ಕೆ ಜ್ವರ ಬಂದಂತೆ ಬಾಡಿತು; ಅರ್ಧ ಸುಟ್ಟ ತರಕಿನೆಲೆಗಳ ಚೂರುಗಳು ಅಂತರಿಕ್ಷದಲ್ಲಿ ಚಲ್ಲಾಪಿಲ್ಲಿಯಾಗಿ ಉಯ್ಯಾಲೆ ಆಡಿ ಅನಂತನ ತಲೆಯ ಮೇಲಿಳಿದವು; ಸುಟ್ಟ ವಾಸನೆಯ ಹವೆ; ಸಹಗಮನದ ಆವೇಶದಲ್ಲಿ ಅಕ್ಕು ಬೆಂಕಿಯ ಶಾಖಕ್ಕೆ ಹಣ್ಣಾಗಿದ್ದಳು; ವೀರ ಕಾವಲುಗಾರನಂತೆ ಪಾಚಣ್ಣ ಬೆಂಕಿ ಕಾಡಿಗೆ ಹರಿದುಹೋಗದಂತೆ ನಂದಿಸಲು ಕೈಯಲ್ಲಿ ಹಸಿ ಸೊಪ್ಪಿನ ಹೆಣೆಯೊಂದನ್ನು ಹಿಡಿದು ವಾಮಾಚಾರಿಯಂತೆ ನಿಂತಿದ್ದ. ದಂಪತಿಯ ಯಾಗ ಬೆರಗನ್ನುಂಟುಮಾಡಿತ್ತು. ಬೆಂಕಿಯ ರೌದ್ರ ಕೋಲಾಹಲವೆದ್ದು ಅದು ಬಂದಷ್ಟೆ ವೇಗವಾಗಿ ರೊಚ್ಚಿನಿಂದ ಕಣ್ಮರೆಯಾಯಿತು.

ಇನ್ನೇನು ಮೇ ಕೊನೆಗೆ ಗಡಿಮಳೆ ಹಿಡಿಯುವ ಸೂಚನೆಯಾಗುತ್ತಿದ್ದಂತೆ ಒಣ ಜೀಡು, ಮುಳ್ಳು ಗಿಡಕಂಟಿಗಳಿಗೆ ಬೆಂಕಿ ಒಟ್ಟುವುದು ವಾಡಿಕೆ. ಈ ಕೆಲಸಕ್ಕೆ ಸ್ವತಃ ಅಕ್ಕು ನಿಂತಿರುವುದು ಅನಂತನಿಗೆ ಅಚ್ಚರಿ ಎನಿಸಿತು. ಎಂದಿನಂತೆ ಉಕ್ಕುತ್ತ ನುಡಿದಳು:

“ಆ ದಿನ ಹಾವಳಿ ಬಂದದ್ದು ನೀ ನೋಡಿದ್ಯಲಾ, ತಿಂಗಳಾತು ಪತ್ತೆನೇ ಇಲ್ಲೆ! ಆಯಿ ಕರ್ಕಂಡ ಬತ್ತೆ ಹೇಳಿ ಮೋಟಾರ ಖರ್ಚಿಗೆ ದುಡ್ಡು ಬೇಡ್ಕಂಡು ಬಿಡಾರದ ಸಾಮಾನು ಗಂಟು ಕಟ್ಟಿ ಇಟ್ಟು ಹೋದ ಪರ್ದೇಶಿಯ ದಾರಿ ಕಾದು ಸಾಕಾತು. ತಾರಿಬಾಗ್ಲು ಆಯಿಮನೆ ಒರ್ಲೆಗೆ ಬರೊ ಮಳೆಗಾಲಕ್ಕೆ ಕುಸಿದು ಬೀಳೋದು ಗ್ಯಾರಂಟಿ ಎಂದು ಸುದ್ದಿ ತಂದವ ಅಂವ್ನೆ. ಆಯಿಗೆ ಎರಡೂ ಕಾಲಿನ ಗಂಟು ನೋವು. ಕೆಳಗೆ ನೆಲಕ್ಕೆ ಕೂತ್ಕಳ್ಳೋದಿಲ್ಲೆ. ಆಯೀನಾ ಇಲ್ಲಿಗೆ ಕರೆಸಿ ಕಾಯಂ ಇಟ್ಕಳ್ಳೋದು ತೀರ್ಮಾನ ಆತು; ಹಾವಳಿ ಸಂಡಾಸಕ್ಕೆ ಕಮೋಡ ಕೂರ್ಸಿಕೊಟ್ಟ. ನಿನ್ನ ಪಾಚಣ್ಣ ದೊಡ್ಡ ಮನಸು ಮಾಡಿ ಒಪ್ಪಿಗೆ ಕೊಟ್ರೋ ಮಾರಾಯ! ಎರಡನೇ ಸಂಬಂಧವಾದ್ರೂ ತನ್ನ ಅಳಿಯ ಹೇಳಿ ಒಪ್ಪಿಕೊಂಡಿದ್ದೇ ಆಯಿ ಮೇಲಿನ ಈ ಗೌರವಕ್ಕೆ ಕಾರಣ. ಕಾಲು ತೊಳ್ಕಂಡು ಬತ್ತೆ; ನೀನು ಜಗಲಿಗೆ ಹೋಗಿ ಕೂತ್ಕ. ನಿನ್ನಿಂದ ಒಂದು ಉಪ್ಕಾರ ಆಗವು” ಅಕ್ಕು ಎಡಗಾಲು ಕುಂಟಿ ಊರುತ್ತ ಹಿತ್ತಲ ಬಳಸಿ ಅಬ್ಬಿಗೆ ಹೋದಳು. ಅನಂತ ಕದ ದೂಕಿ ಮಂಚದ ಮೇಲೆ ಕುಳಿತ. ಪಂಜಿಯಲ್ಲಿ ಪ್ರತ್ಯಕ್ಷನಾದ ಪಾಚಣ್ಣ ಆದಿವಾಸಿಯಂತೆ ಕಾಣುತ್ತಿದ್ದ.

“ನಮ್ಮನೆ ಪ್ರಾಣಿ ನಿನ್ನ ಭಜನೆ ಮಾಡ್ತಾ ಇದ್ದು” ಎನ್ನುತ್ತ ಅಂಗೋಸ್ತ್ರ ಕಾಣುವಂತೆ ನೆಲಕ್ಕೆ ಬಡಕಲು ಚಪ್ಪಟೆ ಸಪಾಟು ಹಲಗೆಯಂತಹ ತೊಡೆ ಕಿಸಿದು ಕಂಬಕ್ಕೆ ಚಾಚಿ ಕವಳದ ಹಸಿ ಅಡಕೆಯನ್ನು ಕತ್ತಿಯಿಂದ ಪರಪರನೆ ಕೆರೆಯಲು ತೊಡಗಿದ. ಅದೇ ಕತ್ತಿಯಿಂದ ಕೈ ತಲುಪದ ಬೆನ್ನಿನ ಭಾಗವನ್ನು ತುರಿಸಿದ; ಅವನ ಮೈಯಿಂದ ಕಚ್ಚಿದ ಸೌಳಿಗಳನ್ನು ನುರಿದ ಜಂಬು ವಾಸನೆ ಹೊರಡುತ್ತಿತ್ತು. ಅಕ್ಕು ಉಪ್ಪು–ನೀರು ಬೆರೆಸಿದ ಮಜ್ಜಿಗೆ ಕವಳಿಗೆ ಕೊಡುತ್ತ, “ಒಂದ್ಸಲ ನೀನು ಕುಮಟಾಕ್ಕೆ ನಿನ್ನ ಅಕ್ಕು ಸಲುವಾಗಿ ಹೋಗಿ ಬಪ್ಪೂದೇ; ನಾನೇ ಹೋಗ್ತಿದ್ದೆ; ಇವ್ರಿಗೆ ಹಾರ್ಟ್ ಆಪರೇಶನ್ ಆದ್ಮೇಲಿಂದ ರಾತ್ರಿ ಅವರೊಬ್ಬರನ್ನೆ ಬಿಟ್ಟು ಹೋಗುವಾಂಗಿಲ್ಲೆ; ಆಯಿ ಮನೆ ಬೀಳಲಾಯ್ದು; ದತ್ತು ಕುಡ್ತ ಹೆಚ್ಚಾಗಿ